# ಸಾಮೂಹಿಕ ಕಲ್ಯಾಣ ಮಹೋತ್ಸವ

ಚಿತ್ರದುರ್ಗ, ಅ. 5 - ತಾಳಿಯನ್ನು ಕಟ್ಟಿಸಿಕೊಂಡವರು ಮತ್ತು ಕಟ್ಟಿದವರು ಸಾಂಸಾರಿಕ ಜೀವನದಲ್ಲಿ ತಾಳ್ಮೆಯನ್ನು ವಹಿಸಿದಾಗ ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ ಸಹಯೋಗದಲ್ಲಿ ನಡೆದ ಮೂವತ್ತೊಂದನೇ ವರ್ಷ ಹತ್ತನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಶ್ರೀಗಳು ಮಾತನಾಡಿದರು.

ಮಾನವ ದುರ್ಬುದ್ಧಿಯಿಂದ ಹಾಳಾಗುತ್ತಿದ್ದಾನೆ. ಅದರಿಂದ ಅಂತರ ಕಾಯ್ದುಕೊಂಡಾಗ ಸದ್ಬುದ್ಧಿಯಿಂದ ಯಶಸ್ಸು, ಸಾರ್ಥಕತೆ ಸಾಧ್ಯವಾಗುತ್ತದೆ. ಸಂಸಾರದ ರಥವೇರಿರುವ ನೀವೆಲ್ಲ ಸರಾಗವಾಗಿ ನಿರಾತಂಕವಾಗಿ ಜೀವನವನ್ನು ಸಾಗಿಸಿರಿ ಎಂದರು. ಅನೇಕ ಸರ್ಕಾರಗಳು ಸಾಮೂಹಿಕ ಮದುವೆಗಳಿಗೆ ಚಾಲನೆ ನೀಡಿದರೂ ಅವು ಮಧ್ಯದಲ್ಲೆ ನಿಂತ ಉದಾಹರಣೆಗಳಿವೆ. ಆದರೆ ಶ್ರೀಮಠವು ಕಳೆದ 31ವರ್ಷಗಳಿಂದ ಪ್ರತಿತಿಂಗಳು ನಿರಂತರವಾಗಿ ನಡೆಸಿಕೊಂಡು ಬಂದಿದೆ ಎಂದರು.

ಗದಗ ಜಿಲ್ಲೆ ಬೆಳ್ಳಟ್ಟಿಯ ಶ್ರೀ ಬಸವರಾಜ ಸ್ವಾಮಿಗಳು ಮಾತನಾಡಿ, ಮಾತೃಹೃದಯದ ಮುರುಘಾ ಶರಣರು ಸಾಮೂಹಿಕ ವಿವಾಹಗಳನ್ನು ಕಳೆದ 31ವರ್ಷಗಳಿಂದ ಮಾಡುತ್ತ ಬಂದಿರುವುದು ವಿಶೇಷ. ಜಗತ್ತಿನ ಮೊಟ್ಟಮೊದಲ ಸಾಮೂಹಿಕ ವಿವಾಹ ಪ್ರಾರಂಭಿಸಿದವರು 12ನೇ ಶತಮಾನದ ಶರಣರು ಎಂದರೆ ತಪ್ಪಾಗಲಾರದು. ಮುರುಘಾ ಶರಣರು ಪ್ರತಿತಿಂಗಳು ಮಾಡುವ ವಿವಾಹ ಕಾರ್ಯಕ್ರಮಗಳಿಗೆ ನೊಬೆಲ್ ಪ್ರಶಸ್ತಿ ನೀಡಿದರೂ ಅದು ಅವರ ಸೇವೆಗೆ ಕಡಿಮೆ ಎನಿಸುತ್ತದೆ. ನೀರಿನ ಸಾಗರ ದಾಟಲು ತೆಪ್ಪ ಬೇಕು. ಸಂಸಾರ ಸಾಗರ ದಾಟಲು ತೆಪ್ಪಗಿರಬೇಕು. ಗಂಡ ಹೆಂಡತಿ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು, ಹೊಂದಿಕೊಂಡು ದಾಂಪತ್ಯ ಜೀವನ ಕಟ್ಟಿಕೊಳ್ಳಿರಿ ಎಂದು ವಧುವರರಿಗೆ ಕಿವಿಮಾತು ಹೇಳಿದರು.

ಎಸ್.ವಿ. ನಾಗರಾಜಪ್ಪ ವೇದಿಕೆಯಲ್ಲಿದ್ದರು. ಕಾರ್ಯಕ್ರಮದ ದಾಸೋಹಿಗಳಾದ ಶ್ರೀಮತಿ ನಾಗರತ್ನಮ್ಮ ಎಸ್.ರುದ್ರಪ್ಪ ಮತ್ತು ಮಕ್ಕಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಆದಿದ್ರಾವಿಡ ಮತ್ತು ಒಕ್ಕಲಿಗ ಜೋಡಿ ಅಂತರ್ಜಾತಿ ವಿವಾಹ ಸೇರಿದಂತೆ ಒಟ್ಟು 8 ಜೋಡಿಗಳ ವಿವಾಹ ನೆರವೇರಿತು.ಜಮುರಾ ಕಲಾವಿದರು ವಚನ ಪ್ರಾರ್ಥನೆ ಹಾಡಿದರು. ಹರಿವೃಕ್ಷಾಂಮೃತ ದೇವರು ಸ್ವಾಗತಿಸಿದರು. ಟಿ.ಪಿ.ಜ್ಞಾನಮೂರ್ತಿ ನಿರೂಪಿಸಿದರು.




ಮೂವತ್ತೊಂದನೇ ವರ್ಷದ ಹತ್ತನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ


ಮೂವತ್ತೊಂದನೇ
ಸಾಮೂಹಿಕ

